ಬಳಸಿಕೊಂಡು ಭರವಸೆ ಬೆಳೆಸಬೇಕು.

**◆ ಮುಖ್ಯಧಾರೆಯಲ್ಲಿರುವ ಸಾಹಿತಿಗಳು ಮಕ್ಕಳ ಸಾಹಿತ್ಯ ಪ್ರಕಾರದ ಕುರಿತು ತೋರುತ್ತಿರುವ ಅಲಕ್ಷ್ಯಕ್ಕೆ ಕಾರಣಗಳೇನಿರಬಹುದು?**

ಪಾಪ, ಈ ಮುಖ್ಯಧಾರೆಯಲ್ಲಿದ್ದೇವೆ ಎಂದು ತಿಳಿದು ಬರೆಯುತ್ತಿರುವವರಿಗೆ, ತಮಗೆ ಬೇಕಾದ ಓದುಗ ಮನಸ್ಸುಗಳು ಸಿದ್ಧವಾಗುವುದು, ಎಳೆಯರ ಮನಸ್ಸಿನ ಹೊಲದಲ್ಲಿ ಮಕ್ಕಳ ಸಾಹಿತ್ಯದ ಬೀಜಗಳನ್ನು ಬಿತ್ತುವ ಮೂಲಕ ಎಂಬುದರ ಪ್ರಜ್ಞೆ ಇಲ್ಲದಿರುವುದೇ ಈ ಅಲಕ್ಷ್ಯಕ್ಕೆ ಕಾರಣವೆಂದು ಕಾಣುತ್ತಿದೆ. ತಿಳಿವಳಿಕೆ ಕೊರತೆ ಇಲ್ಲದಿದ್ದರೆ ಯಾಕೆ ಅಲ್ಲೊಬ್ಬರು ಇಲ್ಲೊಬ್ಬರು ಮಾತ್ರ ಈ ಪ್ರಕಾರದ ಕಡೆ ಗಮನ ಹರಿಸುತ್ತಿದ್ದರು. ಈಗಲೂ ಕಾಲ ಮಿಂಚಿಲ್ಲ. ಅವರೆಲ್ಲಾ ತಮ್ಮದೇ ಮುಖ್ಯ ಧಾರೆ ಎಂಬ ಹುಸಿ ಕಲ್ಪನೆಗೆ ವಿದಾಯ ಹೇಳಿ, ತಾವು ಬರೆಯುತ್ತಿರುವ ಆಸಕ್ತಿ ಕ್ಷೇತ್ರಗಳ ವಿಷಯಗಳನ್ನೇ ವಿವಿಧ ವಯಸ್ಸಿನ ಮಕ್ಕಳಿಗೆ ಸಲ್ಲುವಂತೆ ಬರೆಯುವಂತಾಗಲಿ ಎಂದು ಆಶಿಸುತ್ತೇನೆ.

**◆ ನಿಮ್ಮ ಜ್ಞಾನ ಚಿಂತನೆಯನ್ನು ಸೃಜನಶೀಲ ಸ್ವರೂಪದಲ್ಲಿ ನೀಡುವ ಭರದಲ್ಲಿ ಮಕ್ಕಳಿಗೆ ಮೀರಿದ್ದನ್ನು ನೀಡಿದ್ದೀರಿ ಅನಿಸಿದೆಯೇ?**

ನನ್ನ ಬರಹಗಳನ್ನು ಪುಸ್ತಕದಲ್ಲಿ ನಿದ್ದೆ ಮಾಡಲು ಬಿಡುವುದಿಲ್ಲ. ಪ್ರಕಟಿಸುವ ಮುನ್ನ ಅವುಗಳನ್ನು ಮಕ್ಕಳ ಗುಂಪಿಗೆ ಒಡ್ಡಿ ನಿದ್ದೆಗೆಡಿಸುತ್ತೇನೆ. ಅಂಥ ಪರೀಕ್ಷೆಯಲ್ಲಿ ಅವು ಪಾಸಾಗಿ ಕುಣಿದಿವೆ. ಮಕ್ಕಳು ದೊಡ್ಡವರೆನಿಸಿದವರಿಗಿಂತ ದೊಡ್ಡ ಕನಸುಗಾರರು ಎಂಬ ನಂಬಿಕೆ ನನ್ನದು. ಇಷ್ಟಕ್ಕೂ ನಿಮ್ಮ ನಿಲುವು ನಾನು ಮಕ್ಕಳಿಗೆ ಮೀರಿದ್ದನ್ನು ನೀಡಿದ್ದೇನೆ ಎನ್ನುವುದಾಗಿದ್ದರೆ ಅದರ ಬಗೆಗೆ ನನಗೆ ಗೌರವವಿದೆ.

**◆ ವರ್ತಮಾನದ ರಂಗಭೂಮಿಯಲ್ಲಿ ಮಕ್ಕಳ ನಾಟಕಗಳು ಪ್ರದರ್ಶನ ಕಾಣುವುದು ಕಡಿಮೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?**

ಎಳೆಯರ ರಂಗಭೂಮಿಯನ್ನು ಸಕ್ರಿಯವಾಗಿರಿಸುವಲ್ಲಿ ಅನೇಕ ಮಕ್ಕಳ ನಾಟಕ ತಂಡಗಳು ಕಾರ್ಯಪ್ರವೃತ್ತವಾಗಿವೆ. ಉದಾಹರಣೆಗೆ, ಶಂಕರ ಹಲಗತ್ತಿಯವರ 'ಚಿಲಿಪಿಲಿ ಬಳಗ', ತುಮರಿಯ 'ಕಿಜಿಕೆ', ಸಿಖಂದರ್ ದಂಡಿನವರ 'ರಂಗ ಸಾಮ್ರಾಟ', ಬೆಂಗಳೂರಿನ 'ಬಿಂಬ', ರಂಗಾಯಣಗಳ 'ಚಿಣ್ಣರ ಮೇಳಗಳು', ದಾಕ್ಷಾಯಿನಿ ಭಟ್ಟರ ಮಕ್ಕಳ ನಾಟಕಗಳ ರಂಗ ಪ್ರಯೋಗಗಳು, ಇವೆಲ್ಲದರ ಜೊತೆಗೆ – ಐ.ಕೆ. ಬೊಳುವಾರ್, ಶೋಭಾ ವೆಂಕಟೇಶ್, ಮಧು ಮಳವಳ್ಳಿ, ಮಾಲತೇಶ್ ಬಡಿಗೇರ್, ಸಹನಾ ಹೊಸಪೇಟೆ, ಶೀಲಾ ಹಾಲ್ಕುರಿಕೆ, ಶಿಗಿ ನರೇಶ್, ನಿಂಗು ಸೊಲಗಿ, ಮೌನೇಶ ವಿಶ್ವಕರ್ಮ, ಇವರ ಪ್ರಯತ್ನಗಳನ್ನು ನಾವು ಗುರ್ತಿಸಿ ಗೌರವಿಸಬೇಕು. ಆದರೆ, ಇಷ್ಟು ಪ್ರಯತ್ನಗಳು ಖಂಡಿತಾ ಸಾಲವು. ಶಾಲಾ ರಂಗಭೂಮಿ ಪುಟಿದೇಳಬೇಕು. ಅದು ತಾನೆ ಹೇಗೆ ಸಾಧ್ಯ? ಶಾಲೆಗಳಿಗೆ ರಂಗ ಶಿಕ್ಷಕರ ನೇಮಕಾತಿ ಆಗಬೇಕೆನ್ನುವ ಬೇಡಿಕೆ ಮರೀಚಿಕೆಯಾಗಿದೆ. ಕರ್ನಾಟಕದ ಸರ್ಕಾರಿ ಶಾಲೆಗಳ ಕುಟುಕು ಜೀವ ಉಳಿಯಲು ಬೇಕಾಗಿರುವ 53 ಸಾವಿರ ಶಿಕ್ಷಕರ ನೇಮಕಾತಿಯೇ ದಶಕಗಳಿಂದ ನನೆಗುದಿಗೆ ಬಿದ್ದಿರುವಾಗ, ರಂಗ ಶಿಕ್ಷಕರನ್ನು ನೇಮಿಸುವುದು ಯಾವ ಕಾಲಕ್ಕೆ?

**◆ ಮಕ್ಕಳ ಸಾಹಿತ್ಯ ಬೆಳೆಸುವ ನಿಟ್ಟಿನಲ್ಲಿ ಮಾಧ್ಯಮಗಳು ತಮ್ಮ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸುತ್ತಿಲ್ಲ ಎನ್ನುವ ಆರೋಪವಿದೆ. ನೀವು ಏನು ಹೇಳುವಿರಿ?**

ಆಕಾಶವಾಣಿ, ದೂರದರ್ಶನ, ಪತ್ರಿಕಾ ಮಾಧ್ಯಮಗಳು ಇತ್ತೀಚಿನ ದಿನಗಳಲ್ಲಿ ಮಕ್ಕಳ ಸಾಹಿತ್ಯಕ್ಕೆ ಕೊಡುತ್ತಿರುವ ಆದ್ಯತೆ ತೀರಾ ಕಡಿಮೆಯಾಗಿದೆ. ಕನ್ನಡ ಮಕ್ಕಳೇ ಕಣ್ಮರೆಯಾಗುತ್ತಿರುವ ಈ ದಿನಗಳಲ್ಲಿ ಅವರು ತಾನೆ ಯಾರಿಗೆ ಮಕ್ಕಳ ಸಾಹಿತ್ಯವನ್ನು ಪ್ರಚುರಪಡಿಸಬೇಕು. ಅಲ್ಲದೆ, ಈಗ ಅಳಿದುಳಿದಿರುವ ಕನ್ನಡ ಮಕ್ಕಳು ಬಡವರ ಮಕ್ಕಳು ತಾನೆ. ಅವರಿಗಾಗಿ ಮಿಡಿದರೆ ಎಷ್ಟು, ಮಿಡಿಯದಿದ್ದರೆ ಎಷ್ಟು, ಕೇಳುವವರಾರು? ಪ್ರಭುತ್ವ ವ್ಯವಸ್ಥಿತವಾಗಿ ಬಟಾಬಯಲಲ್ಲಿ ಕನ್ನಡದ ಮಕ್ಕಳ ಕತ್ತು ಹಿಸುಕುತ್ತಿರುವುದು ನಿಚ್ಚಳವಾಗಿದೆ.

**◆ ಸಮಕಾಲೀನ ಮಕ್ಕಳ ಸಾಹಿತ್ಯ ಬರಹಗಾರರ ಕುರಿತು ನಿಮ್ಮ ಗ್ರಹಿಕೆ ಏನು?**

ಹೊಸ ಪೀಳಿಗೆಯಲ್ಲಿ ನಿಮ್ಮಂತೆ ಅನೇಕ ಕಥೆಗಾರರು, ಕವಿಗಳು, ಲೇಖಕರು ಮಕ್ಕಳಿಗಾಗಿ ತಮ್ಮನ್ನು ತಾವು ತೆತ್ತುಕೊಂಡು ಬರೆಯುತ್ತಿದ್ದಾರೆ. ನಾವು ಇನ್ನೂ ಜೋರಾಗಿ ಪರಿಣಾಮಕಾರಿಯಾಗಿ ಹಾಡಬೇಕು, ಬರೆಯಬೇಕು, ಮಾತಾಡಬೇಕು, ಪ್ರಭಾವಿಸಬೇಕು. ●